ರಾಜ್ಯಪಾಲ ಭಾರದ್ವಾಜ ಅವರಿಂದ 'ಅತ್ಯುತ್ತಮ ಕೊಳಲು ವಾದಕ' ಪ್ರಶಸ್ತಿ, 11ನೇ ವಯಸ್ಸಿನಲ್ಲಿ ರೈಸಿಂಗ್ ಸ್ಟಾರ್ ಐಡಿಯ ಜಲ್ಸಾ ರಾಷ್ಟ್ರೀಯ ಪ್ರಶಸ್ತಿ ಹರಿಪ್ರಸಾದ್ ಚೌರಾಸಿಯ ಅವರಿಂದ , 13ನೇ ವಯಸ್ಸಿನಲ್ಲಿ ಷಣ್ಮುಖಾನಂದ ಸಭಾ ನೀಡುವ 'ಷಣ್ಮುಖಾನಂದ ಶಿರೋಮಣಿ' ಪ್ರಶಸ್ತಿ , 13ನೇ ವಯಸ್ಸಿನಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಂದ ಎಂ.ಎಸ್. ಸುಬ್ಬುಲಕ್ಷ್ಮಿ ಫೆಲೋಶಿಪ್, ಆಂಧ್ರ ಮುಖ್ಯಮಂತ್ರಿಗಳಿಂದ ಚೈಲ್ಡ್ ಪ್ರಾಡಿಜಿ ಪ್ರಶಸ್ತಿ... ಸದ್ಯದ ಮಟ್ಟಿಗೆ ದೇಶದಲ್ಲಿ ಅತಿಕಿರಿಯ ವಯಸ್ಸಿಗೆ ಅತಿಹೆಚ್ಚು ಪ್ರತಿಷ್ಠಿತ ಪ್ರಶಸ್ತಿ ಪಡೆದ ದಾಖಲೆಗಳಿವು.

ಬೆಂಗಳೂರು ಮೂಲದ, ಸದ್ಯ ಮುಂಬೈಯಲ್ಲಿ ನೆಲೆಸಿರುವ ಇಪ್ಪತ್ತಮೂರರ ಹರೆಯದ ಆಕಾಶ್ ಎಸ್. ಎಂಬ ಯುವ ಕೊಳಲು ವಾದಕನ ಸಾಧನೆಯ ಯಶೋಗಾಥೆಯಿದು.

## ಬಾನ್ಸುರಿಯಲ್ಲಿ ನಾದ ಚಮತ್ಕಾರ

ಕೆಲವು ಕಲಾವಿದರು ಪುಟ್ಟ ಮಗುವಾಗಿರುವಾಗಲೇ ನಾದದೇವತೆಯನ್ನು ಒಲಿಸಿಕೊಂಡು 'ಚೈಲ್ಡ್ ಪ್ರಾಡಿಜಿ' ಎನಿಸಿಕೊಳ್ಳುತ್ತಾರೆ. ತನ್ನ ಮೂರೂವರೆ ವರ್ಷ ವಯಸ್ಸಿನಲ್ಲೇ ರಾಗಗಳ ಗುರುತಿಸುವಿಕೆ, ಸ್ವರ, ತಾಳ ಜ್ಞಾನ ಪಡೆದು ಭವಿಷ್ಯದ ಉತ್ತಮ ವಾದಕನಾಗುವ ಲಕ್ಷಣಗಳೆಲ್ಲವನ್ನೂ ತೋರಿಸಿಕೊಟ್ಟವನು ಆಕಾಶ್. ತನ್ನ ನಾಲ್ಕನೇ ವಯಸ್ಸಿಗೆ ಪಂ. ವೆಂಕಟೇಶ್ ಗೋಡ್ಖಿಂಡಿ ಅವರ ಬಳಿ ಬಾನ್ಸುರಿ ಕಲಿಯಲು ಆರಂಭಿಸಿದ ಆಕಾಶ್, ಐದು ವರ್ಷದವನಿರುವಾಗಲೇ ಗುರುಗಳ ಜೊತೆಗೆ ಕಛೇರಿ ನೀಡಲೂ ಆರಂಭಿಸಿದ. ಮುಂದೆ ಬಾನ್ಸುರಿಯಲ್ಲಿ ಅಸಾಧಾರಣ ಕೈಚಳಕ ತೋರಿದ ಆಕಾಶ್, ಯಶಸ್ಸಿನ ಮೆಟ್ಟಿಲೇರುತ್ತಾ ಹೋದ. ಕೀರ್ತಿ, ಯಶಸ್ಸು, ಪ್ರಶಸ್ತಿ, ಬಿರುದುಗಳು ಕೈಹಿಡಿಯಲಾರಂಭಿಸಿದವು. ಬೆಂಗಳೂರಿನ ಗಿರಿನಗರದಲ್ಲಿರುವ ಸಂಗೀತ ಸಭಾದಲ್ಲಿ ಮೊದಲ ಕಛೇರಿ. ಅದೂ ಐದನೇ ವಯಸ್ಸಿಗೆ. ಮುಂದೆ ದೇಶದ ಎಲ್ಲ ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರದರ್ಶನ. ಯೂರೋಪ್, ಸಿಂಗಪುರ, ಟರ್ಕಿ, ಬ್ಯಾಂಕಾಕ್, ಅಮೆರಿಕದವರೆಗೂ ಬಾಲಕನ ಬಾನ್ಸುರಿ ಗಾನ ಮೋಡಿ ಮಾಡಿದೆ.

ಬಾನ್ಸುರಿ ವಾದನದಲ್ಲಿ ವಯಸ್ಸಿಗೂ ಮೀರಿದ ಪ್ರತಿಭೆ. ಕೊಳಲು ವಾದನದ ಮಟ್ಟಿಗೆ ಆಕಾಶ್ 'ಚಿಕ್ಕ ವಯಸ್ಸಿನ ದೈತ್ಯ ಪ್ರತಿಭೆ'. ತನ್ನ ಏಳನೇ ವಯಸ್ಸಿಗೇ ಖ್ಯಾತ ಪಿಟೀಲು ವಾದಕಿ ಜ್ಯೋತ್ಸ್ನಾ ಶ್ರೀಕಾಂತ್ ಅವರ ಜತೆ 'ಪಿಟೀಲು–ಕೊಳಲು' ಜುಗಲ್‌ಬಂದಿ ನಡೆಸಿಕೊಟ್ಟಿದ್ದಾನೆ. ಬಾನ್ಸುರಿ ಸೋಲೊ ಕಛೇರಿಗಳಲ್ಲದೆ, ಸಂತೂರ್, ಸಿತಾರ್, ಪಿಟೀಲು ಕಲಾವಿದರ ಜೊತೆಗೆ ಜುಗಲ್‌ಬಂದಿಗಳನ್ನೂ ನಡೆಸಿಕೊಟ್ಟಿದ್ದಾನೆ. ಶಾಸ್ತ್ರೀಯ ಸಂಗೀತಕ್ಕೆ ಮೀಸಲಿರುವ 'ಇನ್‌ಸಿಂಕ್' ಚಾನೆಲ್‌ನಲ್ಲಿ ಆಕಾಶ್ ನುಡಿಸಿದ ಬಾನ್ಸುರಿ ಸೋಲೊ ದೇಶದ ಸಂಗೀತಾಭಿಮಾನಿಗಳ ಮೆಚ್ಚುಗೆ ಗಳಿಸಿದೆ. ಆಕಾಶ್ ನುಡಿಸಿರುವ ಅನೇಕ ರಾಗಗಳನ್ನು ಯೂಟ್ಯೂಬ್‌ನಲ್ಲಿ ಕೇಳಿ ಆಸ್ವಾದಿಸಬಹುದು.

ಈತನ ತಂದೆ ಎಂ.ಎಸ್. ಸತೀಶ್ ಕುಮಾರ್ ಹಾಗೂ ತಾಯಿ ವಾಣಿ ಸತೀಶ್ ಇಬ್ಬರೂ ಸಂಗೀತಪ್ರಿಯರು. ಆಕಾಶ್ ಪಿಯುಸಿ ಬಳಿಕ ಓದಿದ್ದು ಬಿ.ಎ. ಪದವಿ, ನಾಸಿಕ್‌ನಲ್ಲಿ. ಆದರೆ ಸಂಗೀತವನ್ನೇ ವೃತ್ತಿಯನ್ನಾಗಿಸಿದ್ದಾನೆ. ಪಂ. ವೆಂಕಟೇಶ್ ಗೋಡ್ಖಿಂಡಿ ಅವರ ಬಳಿಕ ಆಕಾಶ್, ಹಿಂದೂಸ್ತಾನಿ ಗಾಯಕ ಪಂ. ಜಯತೀರ್ಥ ಮೇವುಂಡಿ ಅವರ ಬಳಿ ಬಾನ್ಸುರಿಯ 'ಗಾಯಕಿ' ಶೈಲಿಯಲ್ಲಿ ಕಳೆದ ಹದಿನಾರು ವರ್ಷಗಳಿಂದ ಅಭ್ಯಾಸ ಮಾಡುತ್ತಿದ್ದು, ಬಾನ್ಸುರಿ ವಾದನದಲ್ಲಿ ಪ್ರಯೋಗಶೀಲ ಗುಣವನ್ನೂ ಮೈಗೂಡಿಸಿಕೊಂಡಿದ್ದಾನೆ.



ವಾರಣಾಸಿಯ ಸಂಕಟ್ ಮೋಚನ್ ಸಂಗೀತ ಸಮಾರೋಹ ಮಾತ್ರವಲ್ಲದೆ, ಹೈದರಾಬಾದಿನಲ್ಲಿ ಪಂ. ಮೋತಿರಾಮ್, ಪಂ. ಮಣಿರಾಮ್ ಉತ್ಸವ, ದೆಹಲಿಯ ನೆಹರು ಕೇಂದ್ರದಲ್ಲಿ ಗುಣಿದಾಸ್ ಸಂಗೀತ ಸಮ್ಮೇಳನ, ಉಜ್ಜಯಿನಿಯ ಮಹಾಕುಂಭ ಸಂಗೀತ ಸಮ್ಮೇಳನ, ಮೈಸೂರು ದಸರಾ, ಗುರುವಾಯೂರು ಸಂಗೀತ ಉತ್ಸವಗಳಲ್ಲಿ ಆಕಾಶ್ ಬಾನ್ಸುರಿ ನಾದ ಅನುರಣಿಸಿದೆ.

'ವೇಣುವಾದನದ ವೈಶಿಷ್ಟ್ಯ, ಚಮತ್ಕಾರ, ಕಲಾತ್ಮಕತೆ, ಸೃಜನಶೀಲತೆ ಅಡಗಿರುವುದೇ ಮೀಂಡ್ (ಸ್ವರಗಳ ಜಾರುವಿಕೆ), ಗಮಕ ಹಾಗೂ ವಿಬ್ರಟೊಗಳ ಪ್ರಯೋಗದಿಂದ. ಇಲ್ಲಿ ಒಬ್ಬ ಕಲಾವಿದನ ಸಾಮರ್ಥ್ಯ ಹಾಗೂ ಮನೋಧರ್ಮ ಅನಾವರಣಗೊಳ್ಳುತ್ತದೆ. ಇಲ್ಲಿ ಕೊಳಲಿನ 'ಗಾಯಕಿ' ಅಂಶ ಹಾಗೂ ತಂತ್ರಕಾರಿ ಅಂಶ ಎರಡೂ ಅಭಿವ್ಯಕ್ತಗೊಳ್ಳುವುದರಿಂದ ನಾದ ಗಾಯನದಂತೆಯೇ ಕೇಳುತ್ತದೆ. ಸತತ ಪ್ರಯತ್ನ, ಸಾಧನೆ ಪರಿಶ್ರಮದಿಂದ ಕಲಾವಿದ ಉತ್ತಮ ಮನೋಧರ್ಮ, ಮೀಂಡ್, ಗಮಕಗಳನ್ನು ವಾದನದಲ್ಲಿ ರೂಢಿಸಿಕೊಳ್ಳಲು ಸಾಧ್ಯ' ಎಂದು ಹೇಳುತ್ತಾರೆ ಆಕಾಶ್.

'ನಾನು ಪುಟ್ಟ ಮಗುವಾಗಿದ್ದಾಗ ತಂದೆ ಮನೆಯಲ್ಲಿ ಕೊಳಲು ವಾದನದ ಕ್ಯಾಸೆಟ್ ಪ್ಲೇ ಮಾಡಿದರು. ಇದನ್ನು ಕೇಳಿ ನಾನು ಕೊಳಲಿನತ್ತ ಆಕರ್ಷಿತನಾದೆ. ಮೂರೂವರೆ ವರ್ಷದ ಮಗುವಿರುವಾಗಲೇ ಕೊಳಲು ಕೈಗೆತ್ತಿಕೊಂಡೆ' ಎನ್ನುತ್ತಾರೆ ಆಕಾಶ್.

'ಬಾನ್ಸುರಿ ನುಡಿಸಾಣಿಕೆಗೆ ಉಸಿರು ನಿಯಂತ್ರಣ ಸಾಮರ್ಥ್ಯ ಬಹಳ ಮುಖ್ಯ ಎನ್ನುವ ಆಕಾಶ್ ಇದು ಸಿದ್ಧಿಸಬೇಕಾದರೆ ದಿನಕ್ಕೆ ಐದಾರು ಗಂಟೆಗಳ ಅಭ್ಯಾಸ ಬೇಕೇ ಬೇಕು. ನಾನು ದಿನನಿತ್ಯ ಆರೇಳು ಗಂಟೆಗಳ ಕಾಲ ರಿಯಾಜ್ ಮಾಡುತ್ತೇನೆ' ಎನ್ನುತ್ತಾರೆ.

'ಕೊಳಲು ಕಲಿಯುವ ಮಕ್ಕಳು ಗುರು–ಶಿಷ್ಯ ಪರಂಪರೆಯಲ್ಲಿ ಕಲಿತರೆ ಬಹಳ ಒಳ್ಳೆಯದು. ಇಲ್ಲವಾದರೆ ಗುರುಗಳ ಸಮ್ಮುಖದಲ್ಲಿಯಂತೂ ಕಲಿಯಲೇ ಬೇಕು. ರಾಗ–ತಾಳ–ಭಾವದ ಜೊತೆಗೆ ಲಯಕಾರಿ, ತಂತ್ರಕಾರಿ ಅಂಶಗಳ ಸರಿಯಾದ ಕಲಿಕೆ, ತಿಳಿವಳಿಕೆಗೆ ಗುರುಗಳ ಸಮ್ಮುಖದಲ್ಲಿ ಅಭ್ಯಾಸ ಮಾಡುವುದೇ ಸರಿಯಾದ ಕ್ರಮ' ಎಂದು ಹೊಸದಾಗಿ ಕಲಿಯಲಾರಂಭಿಸುವ ಮಕ್ಕಳಿಗೆ ಕಿವಿಮಾತು ಹೇಳುತ್ತಾರೆ ಆಕಾಶ್.